

ಇದು ಮತ್ತು ಇನ್ನೂ ಸಾವಿರಾರು ಅಪ್ರಯೋಜಕ ವಂಶವಾಹಿಗಳು ಇಂದಿಗೂ ನಮ್ಮ ದೇಹದಲ್ಲಿವೆ.

ವಿಟಮಿನ್ ಸಿಯನ್ನು ಹೊಂದಿರುವ ಆಹಾರ ಪದಾರ್ಥವನ್ನು ಸೇವಿಸಿದರೂ ಅದನ್ನು ಹೀರಿಕೊಳ್ಳಲು ನಮಗೆ ವಿಟಮಿನ್ ಡಿ ಬೇಕು. ಇದೇ ಕಾರಣಕ್ಕೆ ವಿಟಮಿನ್ ಡಿಯನ್ನು ಹಾಲಿನಲ್ಲಿ ಸೇರಿಸುವುದನ್ನು ಅಭ್ಯಾಸ ಮಾಡಿಕೊಂಡಿದ್ದೇವೆ. ವಿಟಮಿನ್ ಡಿ ಇಲ್ಲದಿದ್ದರೆ ರಿಕೆಟ್ಸ್ ಎನ್ನುವ ಕಾಯಿಲೆ ನಮ್ಮ ಮೂಳೆಗಳು ಬೆಂಡಾಗುವಂತೆ ಮಾಡಿಬಿಡುತ್ತದೆ. ಆದರೆ, ವಿಟಮಿನ್ ಡಿ ನಮ್ಮ ದೇಹದಲ್ಲಿ ತಯಾರಾಗಲು ಸೂರ್ಯನ ಶಾಖ ಬೇಕಾಗುತ್ತದೆ. ಮಾಂಸ, ಮೊಟ್ಟೆ, ಮೀನು, ಹೈನು ಇತ್ಯಾದಿಗಳೂ ನಮಗೆ ಬೇಕಾಗುತ್ತವೆ. ವಿಟಮಿನ್ ಬಿ ಕೂಡ ಇವೇ ಆಹಾರಗಳಲ್ಲಿ ಹೇರಳವಾಗಿ ಸಿಗುತ್ತದೆ.

ಹಾಗಾದರೆ, ಹಸು, ಕುರಿ, ಕುದುರೆಯಂಥ ಸಸ್ಯಾಹಾರಿ ಪ್ರಾಣಿಗಳು ಎಲ್ಲಿಂದ ವಿಟಮಿನ್‌ಗಳನ್ನು ಪಡೆಯುತ್ತವೆ? ಉತ್ತರ: ಅವುಗಳ ದೇಹಕ್ಕೆ ಈ ವಿಟಮಿನ್‌ಗಳನ್ನು ದೇಹದಲ್ಲೇ ತಯಾರಿಸುವ ಶಕ್ತಿಯಿದೆ, ಇದು ಮನುಷ್ಯನಿಗಿಲ್ಲ. ಇನ್ನೂ ವಿಷಾದದ ಸಂಗತಿಯೆಂದರೆ, ಅಕಸ್ಮಾತ್ ಇವುಗಳ ತಯಾರಿ ನಮ್ಮೊಳಗೇ ಆದರೂ ನಮ್ಮ ದೇಹದಲ್ಲಿ ಇರುವ ನ್ಯೂನತೆಗಳ ಕಾರಣ ಇದನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ, ವಿಟಮಿನ್ ಬಿ12 ಅನ್ನು ಮನುಷ್ಯನ ಕರುಳಿನಲ್ಲಿರುವ ಬ್ಯಾಕ್ಟೀರಿಯಾಗಳು ತಯಾರಿಸಬಲ್ಲವು. ಆದರೆ ಮನುಷ್ಯನಿಗೆ ಅದು ದಕ್ಕುವುದಿಲ್ಲ.

ಮನುಷ್ಯನ ದೊಡ್ಡ ಕರುಳಿನಲ್ಲಿನ ಬ್ಯಾಕ್ಟೀರಿಯಾಗಳು ಬಿ 12 ಅನ್ನು ತಯಾರಿಸುತ್ತವೆ. ಆದರೆ ಅಲ್ಲಿಂದಲೇ ಅದನ್ನು ಮನುಷ್ಯ ದೇಹ ಹೀರಿಕೊಳ್ಳಲಾಗುವುದಿಲ್ಲ. ಈ ಶಕ್ತಿಯಿರುವುದು ಸಣ್ಣ ಕರುಳಿಗೆ ಮಾತ್ರ. ಆದರೆ ಸಣ್ಣ ಕರುಳು ದೊಡ್ಡ ಕರುಳಿಗಿಂತ ಮೊದಲೇ ಬರುತ್ತದೆ. ಹಾಗಾಗಿ ಉತ್ಪತ್ತಿಯಾದ ವಿಟಮಿನ್ ಬಿ12 ಉಪಯೋಗವಿಲ್ಲದಾಗುತ್ತದೆ. ಮನುಷ್ಯ ದೇಹಕ್ಕೆ ಇದಕ್ಕಿಂತ ವಿನ್ಯಾಸ ದೋಷ ಮತ್ತು ಅಪಹಾಸ್ಯದ ಅಗತ್ಯವಿದೆಯೇ?

## ಅಗತ್ಯವಿಲ್ಲದ ವಂಶಾವಳಿಗಳು

ಕೆಲವರು ನಮ್ಮ ಮೆದುಳಿನ ಕೇವಲ ಶೇ.10 ಮಾತ್ರ ಇದುವರೆಗೆ ಬಳಕೆಯಾಗಿದ್ದು, ಮಿಕ್ಕೆಲ್ಲ ಮೆದುಳು ಕೂಡ ಉಪಯೋಗವಾದರೆ ಮನುಷ್ಯ ಅತ್ಯದ್ಭುತವಾದುದನ್ನು ಮಾಡಿಬಿಡುತ್ತಿದ್ದ ಎಂದು ಬರೆದದ್ದನ್ನು ಓದಿರಬಹುದು. ಆದರೆ ಅಮೆರಿಕದ ಮಾಲೆಕ್ಯುಲರ್ ಬಯಾಲಜಿಸ್ಟ್ ಜೊನಾಥನ್ ಲೆಂಟ್ ಪ್ರಕಾರ ಇದು ಅಪ್ಪಟ ಸುಳ್ಳು.

ಮೆದುಳಿನ ಕೆಲವು ಭಾಗಗಳು ಕೆಲವು ವಿಶೇಷ ಚಟುವಟಿಕೆಗಳಿಗೆ ಮುಡಿಪಾಗಿದ್ದರೂ ನಾವು ಕೆಲಸ ಮಾಡುವಾಗ ನಮ್ಮ ಪೂರಾ ಮೆದುಳು ಸಂಪೂರ್ಣವಾಗಿ ಚಟುವಟಿಕೆಯಿಂದ ಕೂಡಿರುತ್ತದೆ. ಯಾವ ಭಾಗವೂ ನಿಷ್ಕ್ರಿಯಗೊಂಡಿರುವುದಿಲ್ಲ. ಆದರೆ, ವಂಶಾವಳಿಗಳು ಹಾಗಲ್ಲ. ಒಂದೇ ಒಂದು ಡಿ.ಎನ್.ಎ.ನಲ್ಲಿ ಉಪಯೋಗವಾಗದ ವಂಶಾವಳಿಗಳು ಅತ್ಯಧಿಕ ಸಂಖ್ಯೆಯಲ್ಲಿವೆ. ಇವನ್ನು ನಾವು ಜಂಕ್ ಡಿ.ಎನ್.ಎ. ಎಂದು ಕರೆದಿದ್ದೂ ಉಂಟು. ಕೆಲವರು ಇವಕ್ಕೂ ಕೆಲಸವಿದೆ ಎಂದು ಪ್ರತಿಪಾದನೆ ಮಾಡಿದ್ದಾರೆ.

ತಿರುಚಿಕೊಂಡ ಏಣಿಯಂತೆ ಕಾಣುವ ಪ್ರತಿ ಡಿಎನ್‌ಎನಲ್ಲಿ 2.3 ಬಿಲಿಯನ್ ಮೆಟ್ಟಿಲುಗಳಿವೆ. ಅಕ್ಷರಗಳಲ್ಲಿ ನಾವು ಗುರುತಿಸುವ 4.6 ಬಿಲಿಯನ್ ಸಂಕೇತಗಳಿವೆ. ಇದರಲ್ಲಿ ಕೇವಲ ಶೇ.3 ಮಾತ್ರ ಉಪಯುಕ್ತ. ಇನ್ನುಳಿದ ಶೇ.97 ಸುಮ್ಮನೆ ಇರುತ್ತವೆ.

ನಮ್ಮ ಪ್ರತಿ ಜೀವಕೋಶದಲ್ಲಿ ಬರೀ ಒಂದು ಡಿ.ಎನ್.ಎ ಇರುವುದಿಲ್ಲ, ಬದಲು 46 ಕ್ರೋಮೊಸೋಮುಗಳಿವೆ. ಹಾಗೆಂದರೆ ಅದೆಷ್ಟು ಭಾಗ ವಂಶಾವಳಿಗಳು ಅಗತ್ಯವಿಲ್ಲದೆ ನಮ್ಮ ದೇಹದಲ್ಲಿರಬಹುದು? ಅವೆಲ್ಲ ಯಾಕೆ ಬೇಕಿತ್ತು? ಅಥವಾ ಇಷ್ಟೆಲ್ಲ ಅನಗತ್ಯದ ಮಧ್ಯೆಯೂ ಮನುಷ್ಯ ಈ ಮಟ್ಟದ ಪರಿಪೂರ್ಣ ಜೀವಿಯಾಗಿದ್ದಾನೆ ಎಂದು ಸಂತಸ ಪಡಬೇಕೇ? ಆದರೆ ಇದನ್ನು ಪ್ರಕೃತಿಯ ಚೌಕಟ್ಟಿನಲ್ಲಿ ಅವಲೋಕಿಸುವುದು ಮನುಷ್ಯನಿಗೆ ಅತ್ಯಗತ್ಯ. ಉದಾಹರಣೆಗೆ, ತಂದೆ–ತಾಯಿಯಲ್ಲಿರುವ ಒಂದು ದೋಷ ಮಕ್ಕಳಿಗೆ ಬಂದರೆ ಅದು ತಕ್ಷಣ ಕಾಣಿಸದಿರಬಹುದು. ಅಥವಾ ಇನ್ನೂ ಕೆಟ್ಟದಾಗಿ ವ್ಯಕ್ತವಾಗಬಹುದು. ಇದರ ನಿವಾರಣೆ ವಂಶಾವಳಿಗಳ ಮಟ್ಟದಲ್ಲಿ ನಡೆಯದಿದ್ದರೆ, ಇದು ಇಡೀ ಸಮಾಜದಲ್ಲಿ ಹಲವರಲ್ಲಿ ಕಾಣಿಸಬಹುದು. ಪ್ರಕೃತಿಗೆ ಇಂತಹ ದೋಷಗಳನ್ನು ತೊಡೆದುಕೊಳ್ಳುವುದು ಎಷ್ಟೋ ಬಾರಿ ಸಾಧ್ಯವಾಗುವುದಿಲ್ಲ.

## ಯಾವ ಪ್ರಭೇದ ಅತ್ಯಂತ ಬಲಿಷ್ಠ?

ಪ್ರಕೃತಿಯ ಪ್ರಕಾರ ಯಾವ ಪ್ರಭೇದ ಎಲ್ಲ ಕಾಲಕ್ಕೂ ಬದುಕುಳಿಯುತ್ತದೋ ಅದೇ ಅತ್ಯಂತ ಬಲಿಷ್ಠವಾದದ್ದು. ಎಲ್ಲ ಬದಲಾವಣೆಗಳಿಗೆ ಹೊಂದಿಕೊಳ್ಳುವ ಜೀವಿಗಳು ಮಾತ್ರವೇ ಬದುಕುಳಿಯಬಲ್ಲವು. ಅಂದರೆ, ಪರಿಸರ ಬದಲಾದಂತೆಲ್ಲ ತಾವೂ ಬದಲಾಗಬಲ್ಲಂಥ ಜೀವಿಗಳು ಬಲಿಷ್ಠವಾದವು. ಇದೇ ಕಾರಣಕ್ಕೆ ಸಂಶಯವೇ ಇಲ್ಲದಂತೆ ಬ್ಯಾಕ್ಟೀರಿಯಾಗಳು, ವೈರಸ್ಸುಗಳು, ಫಂಗಸ್ಸುಗಳು ಮನುಷ್ಯನಿಗಿಂತ ಅತ್ಯಂತ ಬಲಿಷ್ಠ. ಹಲವು ರೂಪಾಂತರಗಳನ್ನು ಸೃಷ್ಟಿಸುತ್ತ 21ನೇ ಶತಮಾನದ ಮನುಕುಲವನ್ನು ಕಂಗೆಡಿಸಿದ ಕೊರೊನಾ ವೈರಸ್ಸು ಇದಕ್ಕೊಂದು ಉದಾಹರಣೆಯಷ್ಟೆ. ಮನುಷ್ಯನಿಗೆ ಪ್ರತಿಕೂಲ ವಾತಾವರಣಕ್ಕೆ ಹೊಂದಿಕೊಳ್ಳುವ ಗುಣವಿಲ್ಲ. ಅಂತಹ ಗುಣಗಳನ್ನು ಬೆಳೆಸಿಕೊಳ್ಳಲು ಮಿಲಿಯಗಟ್ಟಲೆ ವರ್ಷ ಬೇಕಾದೀತೇನೋ?

ಅತ್ಯಂತ ಶೀತಲ ವಾತಾವರಣಕ್ಕೆ ಹೊಂದಿಕೊಂಡು ಬದುಕಲು ಯಾವುದೇ ಮನುಷ್ಯನ ದೇಹಕ್ಕೆ ಶಕ್ತಿಯಿಲ್ಲ. ಬದಲು ತನ್ನ ದೇಹಕ್ಕೆ ಅಗತ್ಯವಾದ ಶಾಖವನ್ನು ತನ್ನ ಸುತ್ತ ನಿರ್ಮಿಸಿಕೊಳ್ಳುವುದರಲ್ಲಿ ಮನುಷ್ಯನ ಬುದ್ಧಿವಂತಿಕೆ ಮತ್ತು ಮಿತಿ ಎರಡೂ ಅಡಗಿದೆ. ಆದರೆ, ಪ್ರತಿ 20 ನಿಮಿಷಕ್ಕೆ ಹೊಸ ಮಾರ್ಪಾಡನ್ನು ಹೊಂದಬಲ್ಲ ಬ್ಯಾಕ್ಟೀರಿಯಾಗಳಿವೆ. ವಿಕಸನದ ಪ್ರಕ್ರಿಯೆಯಲ್ಲಿ ಮನುಷ್ಯ ಬಿಲಿಯಗಟ್ಟಲೆ ವರ್ಷ ಹಿಂದುಳಿದಿದ್ದಾನೆ.

ಪ್ರಕೃತಿಯ ನಿಯಮದಲ್ಲಿ ಸತತ ಸಂತಾನೋತ್ಪತ್ತಿ ಕೂಡ ಮನುಷ್ಯನ ಅಥವಾ ಸಸ್ತನಿ ಪ್ರಾಣಿಗಳ ಉಳಿವಿಗೆ ಅತಿಮುಖ್ಯ. ಆದರೆ ಬೆಕ್ಕಿಗೋ ನಾಯಿಗೋ ಹೋಲಿಸಿದರೆ ಮನುಷ್ಯನ ಸಂತಾನೋತ್ಪತ್ತಿ ಬಹಳ ನಿಧಾನ. ಒಂದು ಬಾರಿ ಗರ್ಭ ಧರಿಸಿದರೆ ಒಂದಕ್ಕಿಂತ ಹೆಚ್ಚು ಸಂತಾನ ಹುಟ್ಟುವುದು ವಿರಳವೇ. ಆದರೂ ಮನುಷ್ಯರ ಸಂಖ್ಯೆ 700 ಕೋಟಿಗೂ ಹೆಚ್ಚಾಗಿರುವುದಕ್ಕೆ ಆಧುನಿಕ ವೈದ್ಯಕೀಯ ರಂಗದಲ್ಲಿನ ಕ್ರಾಂತಿಗಳೇ ಕಾರಣ. ಜನನದಲ್ಲಿ ಆಗಬಹುದಾದ ಸಾವುಗಳನ್ನು ಹತ್ತಿಕ್ಕಿ, ರೋಗಗಳನ್ನು ದೂರವಿಟ್ಟು, ಆಯುಷ್ಯವನ್ನು ಉದ್ದ ಮಾಡಿಕೊಳ್ಳುತ್ತಿರುವ ಒಂದೇ ಕಾರಣಕ್ಕೆ ಮನುಷ್ಯ ಅತ್ಯಧಿಕ ಸಂಖ್ಯೆಯಲ್ಲಿ ಬದುಕುಳಿದಿದ್ದಾನೆ. ಇಲ್ಲದಿದ್ದಲ್ಲಿ ಬೆಕ್ಕು, ನಾಯಿಗಳ ಸಂಖ್ಯೆ ಮನುಷ್ಯರಿಗಿಂತ ಹೆಚ್ಚಿರುತ್ತಿದ್ದುದು ಸುಳ್ಳಲ್ಲ.

## ನಮ್ಮ ದೇಹವೇ ಶತ್ರುವಿನಂತೆ

ಮನುಷ್ಯರು ಅನುಭವಿಸುವ ತಲೆಶೀತ, ಜಠರ ವ್ರಣ, ಅಲರ್ಜಿ–ಇವು ಇತರೆ ಪ್ರಾಣಿಗಳ ದೇಹವನ್ನು ಕಾಡುವುದಿಲ್ಲ. ಮನುಷ್ಯರ ದೇಹದ ಮತ್ತೊಂದು ನಗೆಪಾಟಲಿನ ವಿಚಾರ ಎಂದರೆ, ಹಲವು ಬಾರಿ ಅದು ತನ್ನ ದೇಹವನ್ನೇ ಶತ್ರುವೆಂದು ಬಗೆದು ದಾಳಿ ಮಾಡುವುದು. ಹಲವು ಸ್ವಯಂನಿರೋಧಕ ಕಾಯಿಲೆಗಳು ಕೂಡ ಮನುಷ್ಯರಲ್ಲಲ್ಲದೆ ಪ್ರಾಣಿಗಳಲ್ಲಿ ಕಂಡುಬರುವುದಿಲ್ಲ. ಇದು ಬ್ಯಾಕ್ಟೀರಿಯಾ ಅಥವಾ ವೈರಸ್ಸುಗಳ ಕಾರಣದಿಂದ ಬರುವ ಕಾಯಿಲೆಯೂ ಅಲ್ಲ. ಬದಲು ಮನುಷ್ಯನ ಜೀವನಿರೋಧಕ ಶಕ್ತಿ ತನ್ನದೇ ದೇಹದ ಪ್ರೊಟೀನನ್ನೋ ಅಥವಾ ಜೀವಕೋಶಗಳನ್ನೋ